**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,ನಾಗಮಂಗಲ.**

**ಅಸಲು ದಾವಾ ಸಂಖ್ಯೆ. 130/2017**

**ವಾ.ಸಾ-1**

**ಸಾಕ್ಷಿಗೆ ದಿನಾಂಕಃ 02-04-2026 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಶ್ರೀಮತಿ ಆರ್.ಬಿ ಪ್ರತಿವಾದಿಯರ ಪರ ವಕೀಲರಿಂದಃ**

1. ನಾನು ವಾದಿಯ ಜಾಗವನ್ನು ಒತ್ತುವರಿ ಮಾಡಿದ್ದೇನೆ ಎಂದು ನನ್ನ ವಿರುದ್ದ ದಾವೆ ಸಲ್ಲಿಸಿದ್ದಾರೆ. ವರಲಕ್ಷ್ಮಿ ಕೋಂ ವಸಂತ್ ಕುಮಾರ್, ಪೂರ್ಣಿಮಾ ಕೋಂ ಯೋಗೇಶ್, ಚನ್ನಶೆಟ್ಟಿ ಬಿನ್ ಮರಿಚನ್ನಶೆಟ್ಟಿ ರವರು ನಮ್ಮ ಊರಿನವರು ಎಂದರೆ ಸರಿ. ಸದರಿಯವರಿಗೆ ಮತ್ತು ವಾದಿಗೆ 2014 ರಲ್ಲಿ ಬೋಗಾದಿ ಗ್ರಾಮಪಂಚಾಯಿತಿಯಿಂದ ಜಮೀನು ಮಂಜೂರಾಗಿತ್ತು ಎಂದರೆ ಸರಿಯಲ್ಲ. ಸದರಿ ವಿಚಾರ ನನಗೆ ತಿಳಿದಿದ್ದರೂ ಕೂಡ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

2. ನಾನು ಸ್ವತ್ತನ್ನು 2004 ರಲ್ಲಿ ನಂಜಮ್ಮ ಎಂಬುವವರಿಂದ ಖರೀದಿಸಿದ್ದೇನೆ. ಸದರಿ ನಂಜಮ್ಮರವರ ಗಂಡನ ಹೆಸರು ನನಗೆ ಗೊತ್ತಿಲ್ಲ. ನಂಜಮ್ಮರವರಿಗೆ ಸದರಿ ಆಸ್ತಿ ಹೇಗೆ ಬಂತು ಎಂದು ನನಗೆ ಗೊತ್ತಿಲ್ಲ. ನಂಜಮ್ಮ ಕೋಂ ಕೃಷ್ಣಶೆಟ್ಟಿರವರಿಗೆ ಗ್ರಾಮಠಾಣಾದಲ್ಲಿ ಮಂಜೂರಾಗಿರುವ ಜಮೀನು ಎಂದರೆ ನನಗೆ ಗೊತ್ತಿಲ್ಲ. ನಾನು ನಂಜಮ್ಮರವರಿಗೆ ಆಸ್ತಿಯನ್ನು ಖರೀದಿಸುವ ಮೊದಲು ಅಳತೆಗೆ ಸಂಬಂಧಿಸಿದಂತೆ ನಾನು ಯಾವುದೇ ದಾಖಲಾತಿಗಳನ್ನು ನೋಡಿಲ್ಲ.

3. ದಾಖಲಾತಿಯಂತೆ ನಂಜಮ್ಮರವರ ಹೆಸರಿನಲ್ಲಿ 20X25 ಅಡಿ ಜಾಗ ಮಾತ್ರ ಇತ್ತು ಎಂದರೆ ಸರಿಯಲ್ಲ. ಸದರಿ ನಂಜಮ್ಮರವರು ಅವಿದ್ಯಾವಂತರು ಮತ್ತು ವಾರಸುದಾರರು ಯಾರು ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸದರಿ

ಆಸ್ತಿಯ ಕ್ರಯಪತ್ರವನ್ನು ಬರೆಸುವಾಗ ನಾನು ಉದ್ದೇಶಪೂರ್ವಕವಾಗಿ ಹೆಚ್ಚಿನ ಅಳತೆಯನ್ನು ಬರೆಸಿದ್ದೇನೆ ಎಂದರೆ ಸರಿಯಲ್ಲ.

4. ನಾನು ಮನೆಯನ್ನು 2017-18 ರಲ್ಲಿ ಕಟ್ಟಿಸಿದ್ದೇನೆ. ಮನೆ ಕಟ್ಟುವಾಗ ಆಸ್ತಿಯು ನನ್ನ ಹೆಂಡತಿಯ ಹೆಸರಿನಲ್ಲಿ ಇತ್ತು. ಖಾತೆಯನ್ನು ನನ್ನ ಹೆಂಡತಿಯ ಹೆಸರಿಗೆ ಬದಲಾಯಿಸುವಾಗ ಆಸ್ತಿಯ ಅಳತೆಯನ್ನು 30X25 ಎಂದು ಬರೆಸಿದ್ದೇನೆ ಎಂದರೆ ಸರಿಯಲ್ಲ. ನಿಪಿ 11 ರಲ್ಲಿರುವ ಮಾರುತಿ ನಿಲಯ ಎಂಬ ಮನೆ ನನ್ನ ಹೆಂಡತಿ ಹೆಸರಿನಲ್ಲಿದೆ. 2018 ರಲ್ಲಿ ಸದರಿ ಮನೆಯ ಗೃಹಪ್ರವೇಶವಾಗಿದೆ.

5. ಸದರಿ ಮನೆಯ ಗೃಹ ಪ್ರವೇಶವಾದಾಗ ದಾವೆಯ ವಿಚಾರ ನನಗೆ ತಿಳಿದಿತ್ತು ಎಂದರೆ ನ್ಯಾಯಾಲಯದಿಂದ ನನಗೆ ಆಜ್ಞಾ ಪತ್ರಿಕೆ ಬಂದಿತ್ತು ಎಂದರೆ ಸರಿಯಲ್ಲ. ದಾವೆಯನ್ನು ಹೂಡಲಾಗಿತ್ತು ಮತ್ತು ದಾವೆಯಲ್ಲಿ ಹೊರಡಿಸಲಾದ ತಾತ್ಕಾಲಿಕ ನಿರ್ಬಂದಕಾಜ್ಞೆಯ ವಿಷಯ ಗೊತ್ತಿತ್ತು ಎಂದರೆ ಸರಿಯಲ್ಲ.

6. ದಾವಾ ಸ್ವತ್ತಿನಲ್ಲಿ ನಾನು 8.25X25 ಅಡಿ ಯನ್ನು ಒತ್ತುವರಿ ಮಾಡಿ ಮನೆ ಕಟ್ಟಿದ್ದೇನೆ ಎಂದರೆ ಸರಿಯಲ್ಲ. ನಾನು ಮನೆ ಕಟ್ಟಲು ಪರವಾನಗಿಯನ್ನು ಪಡೆದಿದ್ದೇನೆ. ಸದರಿ ಪರವಾನಗಿಯಲ್ಲಿ ನಮೂದಿಸಿರುವ ಆಸ್ತಿಯ ಚಕ್ಕುಬಂದಿ ಪೂರ್ವಕ್ಕೆ ಗ್ರಾಮಠಾಣಾ ತಿಪ್ಪೆ ಹಳ್ಳ, ಪಶ್ಚಿಮಕ್ಕೆ ಬೀದಿ/ ರಸ್ತೆ, ಉತ್ತರಕ್ಕೆ ನಾಗರಾಜು ರವರ ನಿವೇಶನ ಮತ್ತು ದಕ್ಷಿಣಕ್ಕೆ ತಿಪ್ಪೆಹಳ್ಳ/ ನೀರಿನ ತೊಂಬೆ.

7. ದಾವಾ ಸ್ವತ್ತಿನ ಪೂರ್ವಕ್ಕೆ ಇರುವ ತಿಪ್ಪೆಹಳ್ಳವನ್ನು ಒತ್ತುವರಿ ಮಾಡಿ ಮನೆಯನ್ನು ಕಟ್ಟಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಪರವಾನಗಿಯಂತೆ ಮನೆಯ

**ಅಸಲು ದಾವಾ ಸಂಖ್ಯೆ. 130/2017**
**ವಾ.ಸಾ-1**

ಸುತ್ತಲು ಸೆಟ್ ಬ್ಯಾಕ್ ಜಾಗವನ್ನು ಬಿಟ್ಟು ಮನೆಯನ್ನು ಕಟ್ಟಿಲ್ಲ ಎಂದರೆ ಸರಿಯಲ್ಲ.

8. ಮನೆ ಕಟ್ಟಲು ಸರ್ಕಾರದ ಅಡಮಾನ ಪತ್ರದಲ್ಲಿಯೂ ಪರವಾನಗಿಯಲ್ಲಿ ನಮೂದಿಸಿರುವ ಚಕ್ಕುಬಂದಿಯನ್ನು ನಮೂದಿಸಲಾಗಿದೆ. ನಾನು ಮನೆ ಕಟ್ಟಿರುವ ಪೂರ್ವಕ್ಕೆ ತಿಪ್ಪೆಹಳ್ಳ ಎಂದರೆ ಸರಿ. ಈ ಹಂತದಲ್ಲಿ ಸಾಕ್ಷಿಗೆ ನಿಪಿ22 ನ್ನು ತೋರಿಸಿ, ಸದರಿ ಛಾಯ ಚಿತ್ರದಲ್ಲಿರುವ ನೀಲಿ ಬಣ್ಣದ ಮನೆ ಯಾರದು ಎಂಬ ಪ್ರಶ್ನೆಗೆ ಸಾಕ್ಷಿಯು ನಮ್ಮ ಮನೆ ಎಂದು ಉತ್ತರಿಸಿರುತ್ತಾರೆ ಮತ್ತು ಸದರಿ ಮನೆಯ ಎಡಬಾಗಕ್ಕೆ ಇರುವ ಜಾಗವೇ ತಿಪ್ಪೆ ಹಳ್ಳ ಎಂದು ನುಡಿಯುವರು.

9. ದಾವಾಸ್ವತ್ತಿನಲ್ಲಿ ಒತ್ತುವರಿ ಮಾಡಿದ್ದೀರಾ ಎಂದು ನನ್ನ ಪೋಲೀಸರ್ ಠಾಣೆಯಲ್ಲಿ ದೂರು ದಾಖಲಾಗಿತ್ತು ಎಂದರೆ ಸರಿಯಲ್ಲ. ನಮ್ಮ ಮನೆಯ ಪೂರ್ವಕ್ಕೆ ಗಲ್ಲಿಯನ್ನು ಬಿಟ್ಟಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಒತ್ತುವರಿ ಮಾಡಿ ಮನೆಯನ್ನು ಕಟ್ಟಿಕೊಂಡಿದ್ದರೂ ಕೂಡ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಮನೆಯ ಪೂರ್ವ ದಿಕ್ಕಿನಲ್ಲಿರುವ ಜಾಗದಲ್ಲಿ ವಾದಿಯೇ ಸ್ವಾಧೀನಾನುಬೋಗದಲ್ಲಿ ಇದ್ದಾರೆ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗಾಗಿ ವಕೀಲರು ಸಮಾಯಾವಕಾಶ ಕೋರಿದ್ದರಿಂದ ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸರಿ ಇದೆ.** **ನನ್ನ ಸಮಕ್ಷಮ**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ.,ನ್ಯಾಯಾಲಯ, ನಾಗಮಂಗಲ.**